ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ : 214/2021**

**ಫ್ರಾಸಾ- 6 ಚಾಸಾ- 6**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಸತೀಶ |
| ತಂದೆಯ ಹೆಸರುಃ | : | ರಂಗೇಗೌಡ |
| ವಯಸ್ಸುಃ | : | 53 ವರ್ಷ |
| ಉದ್ಯೋಗಃ | : | ವ್ಯವಸಾಯ |
| ವಾಸ | : | ಜಿ ಮೈಲನಹಳ್ಳಿ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:09-04-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಈಗ ತೋರಿಸಿದ 3 ದಾಖಲೆಗಳಲ್ಲಿರುವ ರುಜು ನನ್ನದೆ. ಸದರಿ ದಾಖಲೆಗಳನ್ನು **ನಿಪಿ-6 ರಿಂದ 8** ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಯಿಂದ 8(ಎ) ಎಂದು ಗುರುತಿಸಲಾಯಿತು. ಗಾಡೇನಹಳ್ಳಿ ಕ್ರಾಸ್ ಬಳಿ ಹೋಗುತ್ತಿರುವಾಗ ಪೊಲೀಸರು ಆ ಸಹಿಗಳನ್ನು ಪಡೆದುಕೊಂಡರು. ನಿಪಿ-6 ರಿಂದ 8ರಲ್ಲಿ ಬರೆದ ವಿಚಾರ ಗೊತ್ತಿಲ್ಲ, ಪೊಲೀಸರು ಓದಿ ಹೇಳಿಲ್ಲ. ಪೊಲೀಸರು ನನ್ನನ್ನು ಹಾಸನ ಗ್ರಾಮಾಂತರ ವೃತ್ತನಿರೀಕ್ಷಕರ ಕಛೇರಿಗೆ ಕರೆಸಿಲ್ಲ, ಅಲ್ಲಿ ಆರೋಪಿಯನ್ನು ನಾನು ನೋಡಿಲ್ಲ. ನನ್ನ ಸಮಕ್ಷಮ ಆರೋಪಿ ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ಪೊಲೀಸರ ಮುಂದೆ ಹಾಜರುಪಡಿಸಿಲ್ಲ. ನ್ಯಾಯಾಲಯದ ಮುಂದಿರುವ ಎಂ.ಒ.3ರ ಮೊಬೈಲ್ ಮತ್ತು ಎಂ.ಒ.4 ರ ಚಾಕುವನ್ನು ನಾನು ಈ ಹಿಂದೆ ನೋಡಿಲ್ಲ. ನಾನು ಸಹಿ ಮಾಡುವ ಕಾಲಕ್ಕೆ ಪೊಲೀಸ್ ಠಾಣೆಯಲ್ಲಿ ಬೈಕನ್ನು ನೋಡಿಲ್ಲ. ಆ ಸಮಯದಲ್ಲಿ ನಾನು ಈಗ ತೋರಿಸಿದ ಫೋಟೋದಲ್ಲಿ ಕಂಡುಬರುವ ಬೈಕನ್ನು ನೋಡಿಲ್ಲ, ಆ ಬೈಕನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿಲ್ಲ. ಈ ಫೋಟೋವನ್ನು ಗುರುತಿಸುವಿಕೆಗಾಗಿ ನಿಪಿ-9ಎಂದು ಗುರುತಿಸಲಾಯಿತು. ಆರೋಪಿ ವಾಸವಿದ್ದ ಬಾಡಿಗೆ ಮನೆಗೆ ನನ್ನನ್ನು ಕರೆದುಕೊಂಡು ಹೋಗಿಲ್ಲ. ನಿಪಿ-3 ರಲ್ಲಿರುವ ಸರವನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿಲ್ಲ. ಆರೋಪಿ ನಮ್ಮನ್ನು ಗಾಡೇನಹಳ್ಳಿ ಕ್ರಾಸ್

ನ ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ. ಅಲ್ಲಿ ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ.

2.ಈಗ ತೋರಿಸಿದ 3 ಫೋಟೋಗಳಲ್ಲಿ ನಾನು ಇದ್ದೇನೆ. ಈ ಫೋಟೋಗಳನ್ನು ಏಕೆ ತೆಗೆದರೆಂದು ಗೊತ್ತಿಲ್ಲ. ಇವುಗಳನ್ನು ನಿಪಿ-10 ರಿಂದ 12 ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ದಿನಾಂಕ 7-1-19ರಂದು ಪೊಲೀಸರು ನ್ಯಾಯಾಲಯದ ಮುಂದಿರುವ ಆರೊಪಿಯನ್ನು ದಸ್ತಗಿರಿ ಮಾಡಿ ಅವರ ವಶದಲ್ಲಿಟ್ಟುಕೊಂಡಿದ್ದರು ಮತ್ತು ಗ್ರಾಮಾಂತರ ಪೊಲೀಸ್ ಠಾಣೆಯ ವೃತ್ತನಿರೀಕ್ಷಕರ ಕಛೇರಿಗೆ ಕರೆಸಿದ್ದರು ಎಂದರೆ ಸರಿಯಲ್ಲ. ಠಗಣೆಯಲ್ಲಿ ಆರೋಪಿಯು ತಾನು ಕೃತ್ಯಕ್ಕೆ ಬಳಸಿದ್ದ ಚಾಕು ಮತ್ತು ಒಂದು ಮೋಟಾರ್ ಬೈಕ್ ನಂಬರ್ ಕೆಎ-02-ಜೆವಿ-1706ನ್ನು ಹಾಜರುಪಡಿಸಿದನು ಎಂದರೆ ಸರಿಯಲ್ಲ. ಪೊಲೀಸರು ಅದನ್ನು ವಶಪಡಿಸಿಕೊಂಡು ನನ್ನ ಸಮಕ್ಷಮ ನಿಪಿ-6ರಂತೆ ಪಂಚನಾಮೆ ಮಾಡಿದರು ಎಂದರೆ ಸರಿಯಲ್ಲ.

2.ಅದೇ ದಿನ ಆರೋಪಿಯು ನಮ್ಮನ್ನು ಮತ್ತು ಪೊಲೀಸರನ್ನು ಆ ಸಮಯದಲ್ಲಿ ತಾನು ವಾಸವಿದ್ದ ಚನ್ನಪಟ್ಟಣ 5ನೇ ಕ್ರಾಸ್ ನಲ್ಲಿರುವ ಮಂಜಪ್ಪನವರ ಮನೆಗೆ ಕರೆದುಕೊಂಡು ಹೋದನುಎಂದರೆ ಸರಿಯಲ್ಲ. ಆಲ್ಲಿ ಆತ ಚಾಸಾ-1 ರವರಿಂದ ದೋಚಿಕೊಂಡಿದ್ದ 2 ಚೆನ್ನದ ಚೈನನ್ನು ಹಾಜರುಪಡಿಸಿದನು ಎಂದರೆ ಸರಿಯಲ್ಲ. ಅದನ್ನು ವಶಪಡಿಸಿಕೊಂಡು ನಿಪಿ-7ರಂತೆ ಪಂಚನಾಮೆ ನಡೆಸಿದರು ಎಂದರೆ ಸರಿಯಲ್ಲ.

3.ನಂತರ ಆರೋಪಿ ನಮ್ಮನ್ನು ಮತ್ತು ಪೊಲೀಸರನ್ನು ಗಾಡೇನಹಳ್ಳಿ ಗ್ರಾಮದ ಕ್ರಾಸ್ ಹತ್ತಿರ ಘಟನಾ ಸ್ಥಳಕ್ಕೆ ಕರೆದುಕೊಂಡು ಹೋದನು ಎಂದರೆ ಸರಿಯಲ್ಲ. ಅಲ್ಲಿ ಆರೋಪಿ ತೋರಿಸಿದ ಸ್ಥಳದಲ್ಲಿ

ಪೊಲೀಸರು ನಿಪಿ-8ರಂತೆ ಪಂಚನಾಮೆ ಮಾಡಿ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ನಿಪಿ-6ರ ಪಂಚನಾಮೆ ಕಾಲದಲ್ಲಿ ನಿಪಿ-10ರಂತೆ ಫೋಟೋ ತೆಗೆಸಿದರು ಹಾಗೂ ನಿಪಿ-7ರ ಪಂಚನಾಮೆ ಕಾಲದಲ್ಲಿ ನಿಪಿ-11 ಮತ್ತು 12 ರಂತೆ ಫೋಟೋ ತೆಗೆಸಿದರು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರವಾಗಿ ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯನ್ನು ನಿಪಿ-13 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**